StudySite.org StudySite.org

| | | | |
|---|---|---|---|
| ಪರೀಕ್ಷಾ ಪತ್ರಿಕೆ | : II | ಪರೀಕ್ಷಾ ಪುಸ್ತಿಕೆಯ ಕ್ರಮ ಸಂಖ್ಯೆ : | |
| ಪರೀಕ್ಷಾ ವಿಷಯ | : ಕನ್ನಡ | ಓ.ಎಂ.ಆರ್. ಹಾಳೆ ಸಂಖ್ಯೆ : | |
| ಪರೀಕ್ಷಾ ವಿಷಯದ ಕೋಡ್ | : ಕೆ – ೦೫೧೧ | ಹಾಜರಾತಿ ಸಂಖ್ಯೆ | (ಪ್ರವೇಶಾತಿ ಪತ್ರಕ್ಕೆ ಸಂಬಂಧಪಟ್ಟಂತೆ ಅಂಕೆಗಳು) |

ಹೆಸರು ಮತ್ತು ಮೇಲ್ವಿಚಾರಕರ/ಗಳ ಸಹಿ

| | | | |
|---|---|---|---|
| ಸಹಿ | : | ಸಹಿ | : |
| ಹೆಸರು | : | ಹೆಸರು | : |

**ಪತ್ರಿಕೆ : II**

**ವಿಷಯ : ಕನ್ನಡ**

ಸಮಯ : ೧ ಗಂಟೆ ೧೫ ನಿಮಿಷಗಳು — ಗರಿಷ್ಠಾಂಕಗಳು : ೧೦೦

ಪುಸ್ತಿಕೆಯಲ್ಲಿ ಒಳಗೊಂಡಿರುವ ಪುಟಗಳ ಸಂಖ್ಯೆ : ೮ — ಪುಸ್ತಿಕೆಯಲ್ಲಿರುವ ಪ್ರಶ್ನೆಗಳ ಸಂಖ್ಯೆ : ೫೦

## ಅಭ್ಯರ್ಥಿಗಳಿಗೆ ಸೂಚನೆಗಳು

೧. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.

೨. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.

೩. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ ೫ ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.

(i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಪ್ರಶ್ನೆಪುಸ್ತಿಕೆ ಸ್ವೀಕರಿಸಬೇಡಿ. ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.

(ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ ೫ ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**

(iii) ಈ ತಾಳೆ ನೋಡಿದ ಬಳಿಕ, ಪರೀಕ್ಷಾ ಪುಸ್ತಿಕೆ ಸಂಖ್ಯೆಯನ್ನು ಓ.ಎಂ.ಆರ್. ಹಾಳೆಯಲ್ಲಿ ನಮೂದಿಸತಕ್ಕದ್ದು ಮತ್ತು ಓ.ಎಂ.ಆರ್. ಹಾಳೆ ಸಂಖ್ಯೆಯನ್ನು ಈ ಪರೀಕ್ಷಾ ಪುಸ್ತಿಕೆಯಲ್ಲಿ ನಮೂದಿಸತಕ್ಕದ್ದು.

೪. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.

**ಉದಾಹರಣೆ :** (A) (B) ● (D)

(C) ಸರಿಯಾದ ಉತ್ತರವಾಗಿದ್ದಾಗ.

೫. ಪ್ರಶ್ನೆಗಳಿಗೆ ಉತ್ತರಗಳನ್ನು, ಪತ್ರಿಕೆ I ಪುಸ್ತಿಕೆಯೊಳಗೆ ಕೊಟ್ಟಿರುವ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು. ಓ.ಎಂ.ಆರ್. ಉತ್ತರ ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.

೬. ಒಳಗೆ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.

೭. ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.

೮. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, ಓ.ಎಂ.ಆರ್. ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬದ್ಧರಾಗಿರುತ್ತೀರಿ.

೯. ಪರೀಕ್ಷೆಯ ಅಂತ್ಯದಲ್ಲಿ ಕಡ್ಡಾಯವಾಗಿ ಪರೀಕ್ಷಾ ಪ್ರಶ್ನೆ ಪುಸ್ತಿಕೆ ಮತ್ತು ಓ.ಎಂ.ಆರ್. ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ ನಿಮ್ಮೊಂದಿಗೆ ಕೊಂಡೊಯ್ಯಬಾರದು.

೧೦. **ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**

೧೧. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಬಳಕೆಯನ್ನು ನಿಷೇಧಿಸಲಾಗಿದೆ.**

೧೨. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**



StudySite.org StudySite.org

StudySite.org StudySite.org

# ಕನ್ನಡ
## ಪತ್ರಿಕೆ – II

ಗಮನಿಸಿ : ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು (೫೦)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (೨)** ಅಂಕಗಳಿರುತ್ತವೆ. ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಿ.

೧. ಗುಣ ಮಧುರಾಂಕನ ಸುಂದರ ವ್ಯಕ್ತಿ ಚಿತ್ರಣವಿರುವ ಶಾಸನ
(A) ಹಲ್ಮಿಡಿ ಶಾಸನ (B) ಗಂಗಾಧರಂ ಶಾಸನ
(C) ತಮಟಕಲ್ಲು ಶಾಸನ (D) ಕಪ್ಪೆ ಅರಭಟ್ಟನ ಶಾಸನ

೨. ಇದು ಒಂದು ಚಂಪೂ ಕಾವ್ಯ
(A) ಶೂದ್ರಕ (B) ಕವಿರಾಜಮಾರ್ಗ
(C) ವೀರೇಶ್ವರ ಚರಿತ (D) ಬಸವಪುರಾಣ

೩. ಈ ಕೃತಿಯ ಕಾಲ ೧೨ನೇ ಶತಮಾನ
(A) ಸುಕುಮಾರ ಚರಿತೆ (B) ಧರ್ಮಾಮೃತ
(C) ಕರ್ನಾಟಕ ಕಾದಂಬರಿ (D) ಲೋಕೋಪಕಾರ

೪. ನಂಜರಾಜನ ಆಶ್ರಯದಲ್ಲಿದ್ದ ಕವಿ
(A) ಗುಬ್ಬಿಯ ಮಲ್ಲಣಾರ್ಯ (B) ಜನ್ನ
(C) ಲಕ್ಕಣ ದಂಡೇಶ (D) ನಂಜುಂಡ

೫. ಭಟ್ಟನಾರಾಯಣನ 'ವೇಣಿಸಂಹಾರ'ದ ಸನ್ನಿವೇಶ ಕಲ್ಪನೆಗಳ ಪ್ರಭಾವ ಈ ಕಾವ್ಯದಲ್ಲಿ ಕಂಡು ಬರುತ್ತದೆ.
(A) ವಿಕ್ರಮಾರ್ಜುನ ವಿಜಯ
(B) ಭುವನೈಕರಾಮಾಭ್ಯುದಯ
(C) ಸಾಹಸಭೀಮ ವಿಜಯ
(D) ಜಗನ್ನಾಥ ವಿಜಯ

೬. "ಪಸರಿಪ ಕನ್ನಡಕ್ಕೊಡೆಯ ನೋರ್ವನೆ ಸತ್ಕವಿ ಪಂಪನಾವಗಂ" ಈ ಹೇಳಿಕೆ ಇರುವ ಕೃತಿ
(A) ಪುಣ್ಯಾಸ್ರವ (B) ಚಾವುಂಡರಾಯ ಪುರಾಣ
(C) ಯಶೋಧರ ಚರಿತೆ (D) ಗಿರಿಜಾ ಕಲ್ಯಾಣ

೭. 'ಕವಿಜಿಹ್ವಾ ಬಂಧಂ' ಕೃತಿಯನ್ನು ಬರೆದ ಕವಿ
(A) ಹರಿಹರ (B) ಈಶ್ವರಕವಿ
(C) ಭೀಮಕವಿ (D) ಕುಮುದೇಂದು

೮. ದೇವರಾಜ ರಚಿಸಿದ ಕೃತಿ
(A) ರಾಜಾವಳಿ ಕಥಾಸಾರ (B) ಪ್ರಭುಗೀತ
(C) ಅಂಜನಾ ಚರಿತೆ (D) ಅಮರುಕ

೯. "A comparative grammar of South Indian family of languages" ಎಂಬ ಕೃತಿ ಬರೆದವರು
(A) ಜೆ. ಎಫ್. ಫ್ಲೀಟ್ (B) ರಾಬರ್ಟಕಾಲ್ಡ್‌ವೆಲ್
(C) ರೆ. ಎಫ್. ಕಿಟಲ್ (D) ವಿಲ್ಯಂ ಕ್ಯಾರಿ

೧೦. ಬಂಕಿಮಚಂದ್ರರ 'ದುರ್ಗೇಶ ನಂದಿನಿ' ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದವರು
(A) ಬಸವಪ್ಪ ಶಾಸ್ತ್ರಿ (B) ಎಸ್. ಜಿ. ನರಸಿಂಹಾಚಾರ್
(C) ಬಿ. ವೆಂಕಟಾಚಾರ್ಯ (D) ಎಂ. ಎಸ್. ಪುಟ್ಟಣ್ಣ

೧೧. 'ಗೋರಾ' ಕೃತಿಯ ಕರ್ತೃ
(A) ರವೀಂದ್ರನಾಥ ಠಾಗೋರ (B) ಪ್ರೇಮಚಂದ್
(C) ಬಂಕಿಮಚಂದ್ರ (D) ಸಲ್ಮಾನ್ ರಶ್ದಿ

೧೨. 'ಗಿಳಿವಿಂಡು' ಸಂಕಲನದ ಕರ್ತೃ
(A) ಕೆ. ಎಸ್. ನರಸಿಂಹಸ್ವಾಮಿ (B) ಕುವೆಂಪು
(C) ದ. ರಾ. ಬೇಂದ್ರೆ (D) ಗೋವಿಂದ ಪೈ

೧೩. 'ಕಂಡದ್ದು ಕಂಡ ಹಾಗೆ' ವಿಮರ್ಶಾಕೃತಿಯ ಕರ್ತೃ
(A) ಕುರ್ತಕೋಟಿ (B) ರಹಮತ್ ತರೀಕೆರೆ
(C) ಪಿ. ಲಂಕೇಶ (D) ಗಿರಡ್ಡಿ ಗೋವಿಂದರಾಜ

೧೪. 'ಭೇದ' ಕಾದಂಬರಿಯನ್ನು ಬರೆದವರು
(A) ಕುಂ. ವೀರಭದ್ರಪ್ಪ (B) ಯಶವಂತ ಚಿತ್ತಾಲ
(C) ವೈದೇಹಿ (D) ಶಾಂತಿನಾಥ ದೇಸಾಯಿ

೧೫. 'ಚಿತ್ರತುರಗ' ನ್ಯಾಯದ ಪ್ರತಿಪಾದಕ
(A) ಶ್ರೀಶಂಕುಕ (B) ಅಭಿನವಗುಪ್ತ
(C) ಭಟ್ಟಲೊಲ್ಲಟ (D) ಭಟ್ಟನಾಯಕ

StudySite.org

೧೬. 'ಕೆಥಾರ್ಸಿಸ್' ಪರಿಕಲ್ಪನೆಯನ್ನು ವಿವರಿಸಿದ ಮೀಮಾಂಸಕ
(A) ಲಾಂಜಿನಸ್ (B) ಹೊರೇಸ್
(C) ಎಫ್. ಆರ್. ಲೀವಿಸ್ (D) ಅರಿಸ್ಟಾಟಲ್

೧೭. 'ಪೊಯಿಟಿಕ್ ಇಮೇಜ್' ವಿಮರ್ಶಾಕೃತಿಯ ಲೇಖಕ
(A) ಟಿ. ಎಸ್. ಇಲಿಯೆಟ್ (B) ಐ. ಎ. ರಿಚರ್ಡ್ಸ್
(C) ಸಿ. ಡಿ. ಲೂಯಿಸ್ (D) ಕ್ರೋಚೆ

೧೮. 'ಬಂದಿಹೆನು' ಈ ಪದ ಕನ್ನಡ ಭಾಷೆಯ ಯಾವ ಅವಸ್ಥೆಗೆ ಸೇರಿದೆ ?
(A) ಹಳಗನ್ನಡ (B) ನಡುಗನ್ನಡ
(C) ಹೊಸಗನ್ನಡ (D) ಪೂರ್ವದ ಹಳಗನ್ನಡ

೧೯. 'ಅರಮನೆ' – ಇದು ಯಾವ ಸಮಾಸ ಪದ ?
(A) ದ್ವಂದ್ವ ಸಮಾಸ (B) ಕರ್ಮಧಾರೆಯ
(C) ಕ್ರಿಯಾ ಸಮಾಸ (D) ತತ್ಪುರುಷ ಸಮಾಸ

೨೦. 'ವರ್ತಮಾನ' ಇದು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ ?
(A) ಸಂಸ್ಕೃತ (B) ಮರಾಠಿ
(C) ಫಾರಸಿ (D) ಗ್ರೀಕ್

**ಬಹು ಆಯ್ಕೆ ಮಾದರಿ ಪ್ರಶ್ನೆಗಳು :**

೨೧. ಇವು ಸಾಂಗತ್ಯ ಕೃತಿಗಳು
(i) ಮೋಹನ ತರಂಗಿಣಿ (ii) ರಾಮಾಶ್ವಮೇಧ
(iii) ಹದಿಬದೆಯ ಧರ್ಮ (iv) ಹರಿಕಥಾಮೃತಸಾರ
ಇವುಗಳಲ್ಲಿ ಸರಿಯಾದ ಉತ್ತರ
(A) (i) ಮತ್ತು (ii) (B) (ii) ಮತ್ತು (iv)
(C) (i) ಮತ್ತು (iii) (D) (i) ಮತ್ತು (iv)



StudySite.org StudySite.org

StudySite.org StudySite.org

೨೨. ಇವರು ೧೨ನೇ ಶತಮಾನದ ವಚನಕಾರರು

(i) ಬಸವಣ್ಣ ಮತ್ತು ತೋಂಟದ ಸಿದ್ಧಲಿಂಗಯತಿ
(ii) ಅಕ್ಕಮಹಾದೇವಿ ಮತ್ತು ಮಡಿವಾಳ ಮಾಚಿದೇವ
(iii) ಚೆನ್ನಬಸವಣ್ಣ ಮತ್ತು ಸ್ವತಂತ್ರ ಸಿದ್ಧಲಿಂಗೇಶ್ವರ
(iv) ಅಲ್ಲಮಪ್ರಭು ಮತ್ತು ಸಿದ್ಧರಾಮ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (ii) (B) (ii) ಮತ್ತು (iv)
(C) (ii) ಮತ್ತು (iii) (D) (iii) ಮತ್ತು (iv)

೨೩. ಇವರು ಷಟ್ಪದಿಯಲ್ಲಿ ಕಾವ್ಯ ರಚಿಸಿದವರು

(i) ಹರಿಹರ (ii) ಕುಮಾರವ್ಯಾಸ
(iii) ಚಾಟು ವಿಠ್ಠಲನಾಥ (iv) ಷಡಕ್ಷರ ದೇವ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iii) (B) (i) ಮತ್ತು (ii)
(C) (i) ಮತ್ತು (iv) (D) (ii) ಮತ್ತು (iii)

೨೪. ಔಚಿತ್ಯ ಮತ್ತು ಧ್ವನಿ ಪರಿಕಲ್ಪನೆಗಳನ್ನು ರೂಪಿಸಿದ ಮೀಮಾಂಸಕರು

(i) ಕ್ಷೇಮೇಂದ್ರ (ii) ಆನಂದ ವರ್ಧನ
(iii) ಕುಂತಕ (iv) ಮಮ್ಮಟ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (ii) (B) (i) ಮತ್ತು (iii)
(C) (ii) ಮತ್ತು (iii) (D) (ii) ಮತ್ತು (iv)

೨೫. ಪ್ರಮುಖ ಸ್ತ್ರೀವಾದಿ ಚಿಂತಕರು

(i) ಕೇಟ್ ಮಿಲೆಟ್ (ii) ಸಿಮೋನ್ ದಬೂವ
(iii) ಅನಾ ಅಖ್ಮಮತೋವ (iv) ಎಂ. ಕೆ. ಇಂದಿರಾ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iv) (B) (ii) ಮತ್ತು (iii)
(C) (i) ಮತ್ತು (ii) (D) (ii) ಮತ್ತು (iv)

೨೬. ಇವು ಅನ್ಯದೇಶೀಯ ಪದಗಳು

(i) ರೈತ, ಕಾಗದ (ii) ಆವು, ತುರು
(iii) ಆಗಿ, ತೆವರು (iv) ರುಜುವಾತು, ರೂಪಸಿ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (ii) (B) (i) ಮತ್ತು (iv)
(C) (ii) ಮತ್ತು (iv) (D) (iii) ಮತ್ತು (ii)

೨೭. ಇವು ಬೇಂದ್ರೆಯವರ ಕೃತಿಗಳು

(i) ಇದು ನಭೋ ವಾಣಿ (ii) ಜೇನಾಗುವಾ
(iii) ಕಾಳರಾತ್ರಿ (iv) ಸಾಹಿತ್ಯದ ವಿರಾಟ್ ಸ್ವರೂಪ

ಇವುಗಳಲ್ಲಿ ಸರಿಯಾದ ಉತ್ತರ

(A) (ii) ಮತ್ತು (iv) (B) (i) ಮತ್ತು (ii)
(C) (ii) ಮತ್ತು (iii) (D) (i) ಮತ್ತು (iv)

೨೮. ಇವು ದಂತ್ಯ ಧ್ವನಿಗಳು

(i) ತ್ ಮತ್ತು ದ್ (ii) ತ್ ಮತ್ತು ಜ್
(iii) ದ್ ಮತ್ತು ಚ್ (iv) ನ್ ಮತ್ತು ಲ್

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iv) (B) (i) ಮತ್ತು (ii)
(C) (i) ಮತ್ತು (iii) (D) (ii) ಮತ್ತು (iv)

೨೯. ಇವು ಅನುವಾದಿತ ನಾಟಕಗಳು

(i) ಟೊಳ್ಳು ಗಟ್ಟಿ ಮತ್ತು ಕತ್ತಲೆ ಬೆಳಕು
(ii) ಪ್ರತಾಪರುದ್ರ ದೇವ ಮತ್ತು ರಾಮವರ್ಮ ಲೀಲಾವತಿ
(iii) ಆಷಾಡಭೂತಿ ಮತ್ತು ಚಂಡಮಾರುತ
(iv) ಬೆರಳ್ಗೆ ಕೊರಳ್ ಮತ್ತು ಜಲಗಾರ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (ii) (B) (iii) ಮತ್ತು (iv)
(C) (ii) ಮತ್ತು (iii) (D) (i) ಮತ್ತು (iv)

೩೦. ಇವು ಚಂದ್ರಶೇಖರ ಕಂಬಾರರ ಕೃತಿಗಳು

(i) ಬೆಳ್ಳಿಮೀನು (ii) ಚಕೋರಿ
(iii) ಬಾರೋ ಸಾಧನಕೇರಿಗೆ (iv) ಮನುಕುಲದ ಹಾಡು

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iii) (B) (i) ಮತ್ತು (ii)
(C) (ii) ಮತ್ತು (iii) (D) (iii) ಮತ್ತು (iv)

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ.

ಈ ಪ್ರಸಂಗದಲ್ಲಿ ಕನ್ನಡ ಸಂಸ್ಕೃತಗಳಿಗೆ ಉಚಿತವಾದ ಪರಸ್ಪರ ಬಾಂಧವ್ಯವನ್ನು ಕುರಿತು ಒಂದು ಮಾತನ್ನಾಡುವುದು ಅಪ್ರಕೃತವೆನಿಸಲಾರದು. ಈ ಎರಡು ಭಾಷೆಗಳಿಗೂ ಅನ್ಯೋನ್ಯ ವೈಷಮ್ಯವು ಎಂದಿಗೂ ಎಷ್ಟು ಮಾತ್ರವೂ ಸಿದ್ಧಿಸಲಾರದು. ಕನ್ನಡದ ಮುಖಾಂತರದಿಂದಲ್ಲದೆ ಸಂಸ್ಕೃತದ ವಾಙ್ಮಯದ ಅಂತಸ್ಸಾರವು ಜನಸಾಮಾನ್ಯದ ಕೈಗೆ ದೊರಕಲಾರದು. ಹಾಗೆಯೇ ಸಂಸ್ಕೃತದ ಬೆಂಬಲವಿದ್ದಲ್ಲದೆ ಕನ್ನಡ ಪರಿಪುಷ್ಟವಾಗಿ ಬೆಳೆಯಲಾರದು. ಸಂಸ್ಕೃತವು ಮಳೆಯ ಮೋಡ; ಕನ್ನಡವು ಅದನ್ನು ಹನಿಯಾಗಿಸಿ ನೆಲಕ್ಕೆ ಬರಮಾಡುವ ತಂಗಾಳಿ . ಹೀಗೆ ಅವೆರಡೂ ಅವಿನಾಭಾವದಿಂದ ಬಾಳಿ ಮುಂದಕ್ಕೆ ಸಾಗಬೇಕಾಗಿದೆ. ಯಾವ ಒಂದೂ ಇನ್ನೊಂದನ್ನು ಬಿಟ್ಟು ಸಾರ್ಥಕವೆನಿಸುವುದು ಅಸಾಧ್ಯ. ವಸ್ತುಸ್ಥಿತಿ ಹೀಗಿರುವಾಗ, ಸಂಸ್ಕೃತೋತ್ಸಾಹಿಗಳೂ ಕರ್ಣಾಟಕೋತ್ಸಾಹಿಗಳೂ ಪರಸ್ಪರ ಸ್ಪರ್ಧಿಗಳಾಗಿ ಬಡಿದಾಡುವುದು ಉಭಯರಿಗೂ ಅನರ್ಥಕರವೇ ಆಗುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಕನ್ನಡದ ಶಬ್ದಕೋಶವೂ ಲಕ್ಷಣಶಾಸ್ತ್ರಗಳೂ ಬಹುಮಟ್ಟಿಗೆ ಸಂಸ್ಕೃತವನ್ನನುಸರಿಸಿವೆಯೆಂಬುದು ಪ್ರಸಿದ್ಧ ಸಂಗತಿ. ಕನ್ನಡ ಪಂಡಿತನಿಗೆ ಸಂಸ್ಕೃತದ ಬಲವಿದ್ದಷ್ಟೂ ಅವನ ಕನ್ನಡಪಾಠವು



StudySite.org StudySite.org

ವೀರ್ಯವತ್ತರವಾಗುವುದು ಸಿದ್ಧವಾಗಿದೆ. ನಮ್ಮ ಕನ್ನಡ ಪಂಡಿತರು ಪ್ರತಿದಿನವೂ ಒಂದಿಷ್ಟು ಸಂಸ್ಕೃತ ಗ್ರಂಥವ್ಯಾಸಂಗವನ್ನಿಟ್ಟುಕೊಳ್ಳುವುದು ಅವರಿಗೆ ಕರ್ತವ್ಯ ಕರ್ಮವಾಗಿದೆ.

ನಮ್ಮ ಸಂಸ್ಕೃತ ಪಂಡಿತರಿಗೆ ಕನ್ನಡ ಸಾಹಿತ್ಯದ ವಿಷಯದಲ್ಲಿ ಅದೇ ತೆರನಾದ ಮಮತೆ ಇನ್ನೂ ಬೆಳೆಯಬೇಕಾಗಿದೆ. ಸಂಸ್ಕೃತ ಪಾಂಡಿತ್ಯವಿರುವ ಮಾತ್ರದಿಂದಲೇ ಕನ್ನಡ ಪಾಂಡಿತ್ಯವಿದ್ದಂತಾಯಿತೆನ್ನುವುದು ಕೇವಲ ಭ್ರಾಂತಿಯ ಮಾತು. ಕನ್ನಡಕ್ಕೂ ಒಂದು ಸ್ವತಂತ್ರವಾದ ರೂಢಿಯಿದೆ; ಒಂದು ಬೇರೆ ಮರ್ಯಾದೆಯಿದೆ; ಬೇರೆ ಗತಿ ಬೇರೆ ಧಾಟಿಗಳಿವೆ. ಸಂಸ್ಕೃತದ ಸಂಪ್ರದಾಯ ಶಾಸ್ತ್ರಗಳು ಮಹರ್ಷಿಕೃತಗಳಾದರೆ ಕನ್ನಡದ ಬಳಕೆ ಆಯಕಟ್ಟುಗಳು ಮಹಾಜನವಿಹಿತಗಳಾದವು. ಇವೂ ಪ್ರತ್ಯೇಕ ಪ್ರಯತ್ನದಿಂದಲೇ ಕಲಿಯಲಾಗತಕ್ಕುವು. ಇವುಗಳನ್ನು ಕಲಿಯಲು ಸಂಸ್ಕೃತ ಪಂಡಿತರು ಪ್ರಯಾಸ ಪಡುವುದರಿಂದ ಅವರ ಲೋಕೋಪಯೋಗಿತೆಯ ಸಾಮರ್ಥ್ಯ ಹೆಚ್ಚಾಗುವುದು.

ಸಂಸ್ಕೃತ ಕನ್ನಡಗಳ ಪರಸ್ಪರ ಸಂಬಂಧವನ್ನು ಕುರಿತು ನಾನು ಹೇಳ ಬಯಸುವ ಮಾತು ಇನ್ನೊಂದಿದೆ. ಈ ಎರಡು ಭಾಷೆಗಳನ್ನೂ ಒಂದೇ ವಿಷಯದ ಎರಡು ಅಂಶಗಳೆಂದು ಪರಿಗಣಿಸಿ, ಎರಡನ್ನೂ ಒಟ್ಟುಗೂಡಿಸಿ ಪಾಠ ಹೇಳುವುದು ಅಪೇಕ್ಷಣೀಯವೆಂದೂ, ಅದು ಅಸಾಧ್ಯವಲ್ಲವೆಂದೂ ನಾನು ಬಹು ದಿನದಿಂದ ಅಭಿಪ್ರಾಯವಿಟ್ಟುಕೊಂಡಿದ್ದೇನೆ. ಕನ್ನಡಕ್ಕಂತೂ ಸಂಸ್ಕೃತದ ಸಹಾಯ ಅನಿವಾರ್ಯವಾಗಿದೆ. ಪಂಪ , ರನ್ನ , ರುದ್ರಭಟ್ಟ , ಷಡಕ್ಷರಿ ಮೊದಲಾದ ಪ್ರಾಚೀನ ಕವಿಗಳ ಕಾವ್ಯಗಳನ್ನು ಓದಿ ಆನಂದಿಸಬೇಕೆನ್ನುವವರಿಗೆ ಸಂಸ್ಕೃತಜ್ಞಾನವು ಅವಶ್ಯವಾಗಿ ಬೇಕಾಗುತ್ತದೆ. ಇನ್ನು ಮುಂದೆ ಹೊಸ ವಿಷಯಗಳನ್ನು ಕುರಿತು ಕನ್ನಡದಲ್ಲಿ ನಿಷ್ಕರ್ಷೆಯಾದ ಪದಗಳಿಂದ ಗ್ರಂಥ ಬರೆಯಬೇಕೆನ್ನುವವರಿಗೂ ನೂತನ ಶಬ್ದಸಾಮಗ್ರಿಯನ್ನು ಹವಣಿಸಿಕೊಳ್ಳಲು ಸಂಸ್ಕೃತಜ್ಞಾನವು ಅವಶ್ಯವಾಗಿರುತ್ತದೆ. ಈ ಎರಡು ಯೋಚನೆಗಳನ್ನೂ ಒತ್ತಟ್ಟಿಗಿಟ್ಟು, ಸಂಸ್ಕೃತದ ಸ್ವತಂತ್ರ ಸಂಪತ್ತನ್ನು ನೋಡಿದರೂ ಅದು ಸಮಸ್ತ ಭಾರತೀಯರಿಗೂ ಉಪಾದೇಯವಾಗಿರುತ್ತದೆ. ಈ ಕಾರಣಗಳಿಂದ ಸಂಸ್ಕೃತದ ಲಘುಪಾಠಗಳು ಕೆಲವನ್ನು ಕನ್ನಡ ಪಾಠದ ಅಂಗವಾಗಿ ನಮ್ಮ ಮಾಧ್ಯಮಿಕ ಶಾಲೆಗಳಲ್ಲಿ ಕಲಿಸಬಹುದೆಂದು ನನಗೆ ತೋರುತ್ತದೆ. ಮುಂದೆ ಮುಂದೆ ಪಂಪನನ್ನೂ ನಾಗವರ್ಮನನ್ನೂ ಸೇವಿಸಬೇಕಾದವರಿಗೆ ವಾಲ್ಮೀಕಿರಾಮಾಯಣದ ಒಂದೆರಡು ಸರ್ಗಗಳು ಅಥವಾ ರಘುವಂಶದ ಒಂದೆರಡು ಸರ್ಗಗಳು ದುರ್ಭರವಾದ ಹೊರೆಯಾಗಲಾರವು. ಸಂಸ್ಕೃತದ ಶ್ರೇಷ್ಠ ಕಾವ್ಯಗಳನ್ನು ಕನ್ನಡಕ್ಕೆ ಪರಿವರ್ತನೆ ಮಾಡುವುದರಿಂದಲೇ ಸಂಸ್ಕೃತದ ಮಧುವನ್ನು ಕನ್ನಡಿಗರಿಗೆ ದೊರಕಿಸುವೆವೆನ್ನುವುದು ಭ್ರಾಂತಿಯ ಮಾತು. ಭಾಷಾಂತರಕರ್ತನ ಬೆರಳಿಗ ಸಿಕ್ಕದೆ ನುಣಿಚಿಕೊಳ್ಳುವ ಸೊಗಸುಗಳು ಇತರ ಭಾಷೆಗಳಲ್ಲಿರುವಂತೆಯೇ ಸಂಸ್ಕೃತದಲ್ಲಿಯೂ ಅನಂತವಾಗಿರುತ್ತವೆ. ಕೃಷ್ಣ ಕರ್ಣಾಮೃತದ ಬೆಡಗುಗಳನ್ನೂ ಗೀತಗೋವಿಂದದ ಒಯ್ಯಾರಗಳನ್ನೂ ಕನ್ನಡಕ್ಕೆ ತರ್ಜುಮೆ ಮಾಡಬಲ್ಲವರಾರು ? ಅನೇಕ ಕನ್ನಡ ಕಾವ್ಯಗಳ ಸೊಬಗುಗಳೂ ಹೀಗೆಯೇ ಸಂಸ್ಕೃತಕ್ಕೆ ತರ್ಜುಮೆಯಾಗಲಾರವು. ಸಂಸ್ಕೃತ ಕನ್ನಡಗಳೆರಡನ್ನೂ ಯಮಳರಂತೆ ಭಾವಿಸಿ, ಎರಡನ್ನೂ ಒಟ್ಟು ಕೂಡಿಸಿ ಪಾಠಹೇಳುವುದರ ಸಾಧ್ಯಾಸಾಧ್ಯತೆಗಳನ್ನು ತಾವುಗಳು ಸಮಾಲೋಚಿಸಬೇಕೆಂದು ಬೇಡುತ್ತೇನೆ.

ಹಾಗೆಯೇ ಕನ್ನಡ ಪಠ್ಯಗ್ರಂಥಗಳಲ್ಲಿ ಎಷ್ಟು ಭಾಗ ಪ್ರಾಚೀನ ಕಾವ್ಯದ್ದಾಗಿರಬೇಕು ಎಂಬುದೂ ವಿಚಾರಾರ್ಹವಾದ ಪ್ರಶ್ನೆ. ಸಂಸ್ಕೃತ ಜ್ಞಾನ ಲಾಭದ ದೃಷ್ಟಿಯಿಂದ ನೋಡಿದರೆ, ಪ್ರಾಚೀನ ಕನ್ನಡ ಕವಿಗಳು ಆಧುನಿಕರಿಗಿಂತಲೂ ನಮಗೆ ಹೆಚ್ಚು ಉಪಕಾರಕರಾಗಿದ್ದಾರೆ. ಪ್ರತ್ತೇಕವಾಗಿ ಸಂಸ್ಕೃತ ಕಲಿಯದವನು ಪಂಪ ಷಡಕ್ಷರಿಗಳ ಕೃತಿಗಳನ್ನೋದಿದರೆ ಆ ಮೂಲಕವೇ ಒಂದಿಷ್ಟು ಸಂಸ್ಕೃತ ಪರಿಚಯವನ್ನು ಸಂಪಾದಿಸಲಾಗುತ್ತದೆ. ಈ ಲಾಭವು ಉಪೇಕ್ಷಿಸಬಹುದಾದಷ್ಟು ಸಣ್ಣದೇನೂ ಅಲ್ಲ. ಈ ಆರ್ಯಸಂಸ್ಕೃತಿ ಮಹಿಮಾದೃಷ್ಟಿಯಿಂದಲೂ ಕನ್ನಡ ಪ್ರಾಚೀನಕಾವ್ಯಗಳ ಪ್ರಾಮುಖ್ಯವನ್ನು ತಗ್ಗಿಸದಿರುವುದು ಯುಕ್ತವೆಂದು ನನಗೆ ತೋರುತ್ತದೆ.

ಕನ್ನಡ ಸಂಸ್ಕೃತಗಳ ಪರಸ್ಪರರಾಪೇಕ್ಷೆಗಳಿಗಿಂತ ಹೆಚ್ಚು ಗಮನವನ್ನು ಕೋರುತ್ತಿರುವ ಅಂಶ ಅವುಗಳೆರಡಕ್ಕೂ ಇರುವ ಇಂಗ್ಲೀಷಿನ ಅಪೇಕ್ಷೆ. ಇದು ಅವೆರಡಕ್ಕೂ ಸಮಾನವಾಗಿ ಅವಶ್ಯವಾದದ್ದು. ನಾನು ಮೇಲೆ ವಿಜ್ಞಾಪಿಸಿದ ಅಸದೃಶಭಾಷಾವ್ಯಾಸಂಗದ ಉಪಯೋಗವನ್ನು ಇಂಗ್ಲೆಂಡಿನವರು ಕಂಡುಕೊಂಡು, ಪಾಠಪಟ್ಟಿಕೆಗಳಲ್ಲಿ ಆಂಗ್ಲಭಾಷೆಯ ಜೊತೆಗೆ ಗ್ರೀಕ್ ಮತ್ತು ಲ್ಯಾಟಿನ್ ಎಂಬ ಪ್ರಾಚೀನ ಭಾಷೆಗಳನ್ನೋ ಅಥವಾ ಫ್ರೆಂಚ್, ಜರ್ಮನ್ ಮೊದಲಾದ ಸಾಂಪ್ರತಕಾಲದ ಭಾಷೆಗಳನ್ನೋ ಸೇರಿಸಿರುತ್ತಾರೆ. ನಮ್ಮ ದೇಶದಲ್ಲಿ ಅನೇಕ ಕಾರಣಗಳಿಂದ ಈಗ ಪ್ರಚಾರದಲ್ಲಿರುವ ಇಂಗ್ಲಿಷ್ ಭಾಷೆಯು ನಮಗೆ ಸಾಹಿತ್ಯದೃಷ್ಟಿಯಿಂದಲೂ ಅಮೋಘವಾದ ಉಪಕಾರವನ್ನು ಮಾಡಬಲ್ಲದ್ದಾಗಿದೆ. ಅದರ ವಾಙ್ಮಯಸಂಪತ್ತಿನ ಎರಡು ಮೂರು ಮುಖ್ಯಾಂಶಗಳು ವಿಶೇಷವಾಗಿ ನಮ್ಮ ಲಕ್ಷ್ಯದಲ್ಲಿರಬೇಕಾದುವು. ಮೊದಲನೆಯದು ಅದರ ಅನುಪಮವಾದ ಕಾವ್ಯಸಮೃದ್ಧಿ. ಸಂಸ್ಕೃತದ ವೈದಿಕ ಮತ್ತು ಪೌರಾಣಿಕ ಕಾವ್ಯ ಸಂಪತ್ತನ್ನು ವಿನಾಯಿಸಿದರೆ ಪರಿಣಾಮದಲ್ಲಾಗಲಿ ಗುಣದಲ್ಲಾಗಲಿ ಇಂಗ್ಲಿಷಿನ ಕಾವ್ಯಭಂಡಾರಕ್ಕೆ ಸರಿದೂಗುವ ಕಾವ್ಯಸಂಪತ್ತು ಇನ್ನಾವ ಭಾಷೆಯಲ್ಲೂ ಇಲ್ಲವೆಂದು ಬಹು ಭಾಷಾನಿಪುಣರು ಬಹುಮಂದಿ ಹೇಳಿದ್ದಾರೆ. ಎರಡನೆಯದಾಗಿ – ಇಂಗ್ಲಿಷಿನಲ್ಲಿರುವ ವಚನಪ್ರಬಂಧರಾಶಿಗೆ ಹೋಲುವಂಥಾ ಸಾಹಿತ್ಯ ಕನ್ನಡದಲ್ಲಿಲ್ಲ ;ಸಂಸ್ಕೃತದಲ್ಲಿಯೂ ಇಲ್ಲ. ಸಂಸ್ಕೃತದ ಭಾಷ್ಯಗ್ರಂಥಗಳನ್ನು ಬಿಟ್ಟರೆ ಇಂಗ್ಲಿಷಿನಲ್ಲಿರುವಂಥ ಪ್ರಸನ್ನ ಗಂಭೀರವಾದ ಗದ್ಯಶೈಲಿ ನಮ್ಮಲ್ಲಿ ಇನ್ನೂ ಹುಟ್ಟಬೇಕಾಗಿದೆ. ಮೂರನೆಯದಾಗಿ–ಸಾಂಪ್ರತಲೋಕದ ಮನೋಗತಿಗಳನ್ನು– ಅದರ ಆಶೆಗಳನ್ನು, ಸಂದೇಹಗಳನ್ನು, ಭೀತಿಗಳನ್ನು, ಅದರ ಯತ್ಕಿಂಚಿತ್ ವಿಜಯಗಳನ್ನು, ಅದರ ಪುನ:ಪುನಸ್ಸಂಗತಗಳಾದ ಆಶಾಭಂಗಗಳನ್ನು, ಅದರ ಜಿಜ್ಞಾಸಾ ಪರಂಪರೆಗಳನ್ನು – ನಮಗೆ ತೋರಿಸುವ ಕೈಗನ್ನಡಿ ಇಂಗ್ಲಿಷ್ ಸಾಹಿತ್ಯ. ಹೀಗೆ ಉಪಲಭ್ಯವಾಗಿರುವ ಪ್ರಕೃತಲೋಕಪರಿಜ್ಞಾನವು ನಮ್ಮ ಸಾಹಿತ್ಯಕ್ಕೆ ತೀರಾ ಅವಶ್ಯವಾಗಿದೆ. ನಮ್ಮಲ್ಲಿ ನವೀನ ಸಾಹಿತ್ಯಸೃಷ್ಟಿಗಾಗಿ ಮಾತ್ರವೇ ಅಲ್ಲ . ಈಗಾಗಲೇ ಸಿದ್ಧವಾಗಿರುವ ಸಾಹಿತ್ಯದ ವಿವರಣೆಗಾಗಿಯೂ ನಮಗೆ ಇಂಗ್ಲಿಷ್ ಸಾಹಿತ್ಯದ ಉಪಕಾರವು ಬೇಕಾಗಿದೆ.

೩೧. ಈ ಲೇಖನದಲ್ಲಿ ಲೇಖಕರು ಚರ್ಚಿಸುತ್ತಿರುವ ವಿಷಯ
(A) ಕನ್ನಡ ಸಂಸ್ಕೃತಗಳ ಬಾಂಧವ್ಯ
(B) ಕನ್ನಡ ಸಂಸ್ಕೃತಗಳನ್ನು ಕಲಿಯಬೇಕೆಂಬ ಒತ್ತಾಯ
(C) ಕನ್ನಡ, ಸಂಸ್ಕೃತ ಹಾಗೂ ಇಂಗ್ಲಿಷ್ ಸಾಹಿತ್ಯ ಕಲಿಕೆಯ ಅವಶ್ಯಕತೆ
(D) ಇಂಗ್ಲಿಷ್ ಭಾಷಾ ಸಾಹಿತ್ಯವೇ ಉತ್ತಮವೆಂಬ ವಿಚಾರ

StudySite.org StudySite.org

೩೨. ಕನ್ನಡ ಸಂಸ್ಕೃತಸಾಹಿತ್ಯಕ್ಕಿರುವ ಪರಸ್ಪರ ಸಂಬಂಧ ಕುರಿತ ಲೇಖಕರ ಆಶಯ

(A) ಕನ್ನಡವು ಸಂಸ್ಕೃತದ ಅನುಸರಣೆಯಾಗಿದೆ

(B) ಕನ್ನಡವು ಜನಸಾಮಾನ್ಯರಿಗೆ ಹತ್ತಿರ, ಆದ್ದರಿಂದ ಸಂಸ್ಕೃತದ ಪಾಂಡಿತ್ಯಮಯ ಆಶಯವನ್ನು ಅದು ಪಡೆಯಬೇಕು

(C) ಕನ್ನಡ ಮತ್ತು ಸಂಸ್ಕೃತ ವಿಭಿನ್ನ ಹಾದಿಯನ್ನು ತುಳಿದಿವೆ. ಅವು ಹತ್ತಿರವಾಗುವುದು ಕಷ್ಟ

(D) ಕನ್ನಡ ಪಂಡಿತರು ಸಂಸ್ಕೃತವನ್ನು ಕಲಿತರೆ ಅವರ ಪಾಂಡಿತ್ಯಕ್ಕೆ ಬಲ ಬರುವುದು. ಸಂಸ್ಕೃತ ಪಂಡಿತರೂ ಕನ್ನಡ ಸಾಹಿತ್ಯ ತಿಳಿದರೆ, ಲೋಕದೃಷ್ಟಿಕೋನ ಹೆಚ್ಚಾಗುವುದು.

೩೩. ಅನುವಾದದ ಮೂಲಕ ಸಾಹಿತ್ಯ ಗ್ರಹಿಕೆಯ ಬಗ್ಗೆ ಲೇಖಕರ ಚಿಂತನೆ

(A) ಅನುವಾದ ಕ್ರಿಯೆಯ ಬಗ್ಗೆ ತೀವ್ರವಾದ ಆಕ್ಷೇಪ. ಮೂಲ ಭಾಷಾ ಸಾಹಿತ್ಯದ ಅಧ್ಯಯನವೇ ಮುಖ್ಯವೆಂಬ ವಿಚಾರ

(B) ಅನುವಾದದಿಂದ ಬೇರೆ ಭಾಷಿಕ ಕೃತಿಗಳನ್ನು ಅರ್ಥ ಮಾಡಿಕೊಳ್ಳುವುದು ಸುಲಭ

(C) ಸಂಸ್ಕೃತ ಭಾಷಾ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸಿದರೆ, ಅರ್ಥ ಮಾಡಿಕೊಳ್ಳಲು ಚೆನ್ನಾಗಿರುತ್ತದೆ

(D) ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯಗಳನ್ನು ಕನ್ನಡದಲ್ಲಿ ತಿಳಿದರೆ ಜ್ಞಾನಕ್ಕೆ ಅನುಕೂಲ

೩೪. ಲೇಖಕರ ಅಭಿಪ್ರಾಯದಲ್ಲಿ ಸಂಸ್ಕೃತ ಹಾಗೂ ಕನ್ನಡ ಪಾಠ ಪ್ರವಚನದ ಸ್ವರೂಪವು ಹೀಗಿರಬೇಕು

(i) ಕನ್ನಡ ಪಠ್ಯಗಳ ಜೊತೆಗೆ ಸಂಸ್ಕೃತ ಪಠ್ಯಗಳ ಭಾಗಗಳನ್ನು ಅಭ್ಯಸಿಸುವುದು

(ii) ಕನ್ನಡ ಪಠ್ಯಗಳ ಜೊತೆಗೆ, ಅನುವಾದಿಸಿದ ಸಂಸ್ಕೃತ ಪಠ್ಯಗಳನ್ನು ಅಭ್ಯಸಿಸುವುದು

(iii) ಕನ್ನಡ ಪಠ್ಯಗಳ ಜೊತೆಗೆ, ಸಂಸ್ಕೃತ , ಹಾಗೂ ಇಂಗ್ಲಿಷ್ ಪಠ್ಯಗಳನ್ನು ಓದಿಸಬೇಕು

(iv) ಕನ್ನಡದ ಪ್ರಾಚೀನ ಕಾವ್ಯಗಳ ಅಧ್ಯಯನವು, ಆ ಕಾವ್ಯಗಳಿಗೆ ಸಂಸ್ಕೃತದಿಂದ ಉಂಟಾದ ಪ್ರಯೋಜನವನ್ನು ಸೂಚಿಸುತ್ತದೆ.

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (ii) (B) (i) ಮತ್ತು (iv)

(C) (ii) ಮತ್ತು (iii) (D) (ii) ಮತ್ತು (iv)

೩೫. ಇಂಗ್ಲಿಷ್ ಭಾಷಾ ಸಾಹಿತ್ಯ ಕುರಿತ ಲೇಖಕರ ಚಿಂತನೆ

(i) ಇಂಗ್ಲಿಷ್ ಸಾಹಿತ್ಯವು ಗುಣ ಮತ್ತು ಪರಿಣಾಮಗಳಿಂದ ಕೂಡಿದ ಕಾವ್ಯ ಸಮೃದ್ಧಿ ಹೊಂದಿದೆ

(ii) ಇಂಗ್ಲಿಷ್‌ನಲ್ಲಿ ಸಂಸ್ಕೃತ ಸಾಹಿತ್ಯದಲ್ಲಿರುವ ಪುರಾಣ ಪ್ರಜ್ಞೆ ಇಲ್ಲ

(iii) ವರ್ತಮಾನದ ಮನುಷ್ಯ ಲೋಕದ ಆಶೆ, ಆಶಾಭಂಗ, ಭೀತಿ, ಮೊದಲಾದ ಅಂಶಗಳನ್ನು, ತಾತ್ವಿಕ ಜಿಜ್ಞಾಸೆಯ ಭಿತ್ತಿಯಲ್ಲಿ ಸಮೃದ್ಧವಾಗಿ ಇಂಗ್ಲಿಷ್ ಸಾಹಿತ್ಯ ತೋರಿಸುತ್ತದೆ

(iv) ಕನ್ನಡ ಸಾಹಿತ್ಯದಲ್ಲಿರುವಂತೆ, ಇಂಗ್ಲಿಷ್ ಸಾಹಿತ್ಯದಲ್ಲಿ ಪಂಪ ಮುಂತಾದ ಶ್ರೇಷ್ಠ ಮಾರ್ಗ ಕವಿಗಳ ಕೊರತೆ ಇದೆ

(A) (ii) ಮತ್ತು (iii) (B) (ii) ಮತ್ತು (iv)

(C) (i) ಮತ್ತು (ii) (D) (i) ಮತ್ತು (iii)

**ಹೇಳಿಕೆ- ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

೩೬. **ಹೇಳಿಕೆ :** ಪಡೆನೋಡಲ್ ಬಂದವರಂ ಗುಡಿವರವೆರಸಿದಂತಾಯಿತ್ತು

**ವಿವರಣೆ :** ಪಡೆನೋಡಲು ಬಂದವರಿಗೆ ಮಂದಿರವನ್ನು ಹೊಗಿಸಿದಂತಾಯಿತು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು , ವಿವರಣೆ ತಪ್ಪು

(D) ಹೇಳಿಕೆ ತಪ್ಪು , ವಿವರಣೆ ಸರಿ

೩೭. **ಹೇಳಿಕೆ :** ಮರುಳೇ ! ಪೊಲ್ಲಮೆಯ ಲೇಸು ನಲ್ಲರ ಮೆಯ್ಯೊಳ್

**ವಿವರಣೆ :** ಹುಚ್ಚಿ ಪ್ರಿಯಕರರ ದೇಹ ಹೊಲಸಾಗಿದ್ದರೂ ಅದು ಒಳ್ಳೆಯದೇ.

(A) ಹೇಳಿಕೆ ತಪ್ಪು, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ತಪ್ಪು

೩೮. **ಹೇಳಿಕೆ :** ಆಲಿಕಲ್ಲ ಹರಳಿನಂತೆ ಮಣ್ಣಿನ ಪುತ್ಥಳಿಯಂತೆ ಮನಕೊರಗಿ ಮರೆವ ದುಃಖವ ನಾನೇಸೆಂಬೆ

**ವಿವರಣೆ :** ಆಲಿಕಲ್ಲ ಹರಳಿನ ಹಾಗೆ ಮಣ್ಣಿನ ಬೊಂಬೆಯಂತೆ ದೇಹ ಕರಗಿ ಕೂಡುವ ಸುಖವನ್ನು ಹೇಗೆ ವರ್ಣಿಸಲಿ.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು , ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ತಪ್ಪು

೩೯. **ಹೇಳಿಕೆ :** ರೋಷದ ಘನತೆ ಹೆಚ್ಚಿತು ಹಿಂಡಿದನು ಹಗೆಗಳನು ಮನದೊಳಗೆ

**ವಿವರಣೆ :** ರೋಷದ ಘನತೆ ಹೆಚ್ಚುವ ಹಾಗೆ ವೈರಿಗಳನ್ನು ಮನಸ್ಸಿನಲ್ಲಿಯೇ ಹಿಂಡಿದನು.

(A) ಹೇಳಿಕೆ ತಪ್ಪು, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ಸರಿ

೪೦. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ

(A) ಲಕ್ಕಣ್ಣ ದಂಡೇಶ – ಶಿವತತ್ವ ಚಿಂತಾಮಣಿ

(B) ಗುಬ್ಬಿಯ ಮಲ್ಲಣಾರ್ಯ – ಬಸವಪುರಾಣ

(C) ಈಶ್ವರಕವಿ – ಸಮಯಪರೀಕ್ಷೆ

(D) ರುದ್ರ ಭಟ್ಟ – ಅನುಭವಾಮೃತ



StudySite.org StudySite.org

StudySite.org StudySite.org

೪೧. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ

(A) ಗಳಗನಾಥ – ಇಜ್ಜೋಡು
(B) ಕುಂ.ವೀರಭದ್ರಪ್ಪ – ನಾಲ್ಕನೇ ಆಯಾಮ
(C) ಶಂಕರಮೊಕಾಶಿಪುಣೇಕರ – ಅವಧೇಶ್ವರಿ
(D) ದೇವುಡು – ಭಾರತೀಪುರ

೪೨. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ

(A) ಯಶವಂತ ಚಿತ್ತಾಲ – ಶಿಕಾರಿ
(B) ಎ. ಕೆ. ರಾಮಾನುಜನ್ – ಏಳುಸುತ್ತಿನಕೋಟೆ
(C) ಪಿ. ಲಂಕೇಶ – ಬಿರುಕು
(D) ಶ್ರೀನಿವಾಸ – ಚೆನ್ನಬಸವನಾಯಕ

೪೩. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ

(A) ಸಾಧಾರಣೀಕರಣವಾದ– ಭಟ್ಟನಾಯಕ
(B) ವಸ್ತುಪ್ರತಿರೂಪ – ಟಿ. ಎಸ್. ಎಲಿಯಟ್
(C) ಅನುಮಿತಿವಾದ – ಭಟ್ಟಲೊಲ್ಲಟ
(D) ವ್ಯಕ್ತಿತ್ವ ನಿರಸನ – ಕ್ರೋಚೆ

೪೪. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ

(A) ಅರಲು ಬರಲು – ದ. ರಾ. ಬೇಂದ್ರೆ
(B) ವೈಶಾಖ – ಚದುರಂಗ
(C) ಸಾಹಿತ್ಯಕಥನ – ಡಿ. ಆರ್. ನಾಗರಾಜ
(D) ಯುಗಸಂಧ್ಯಾ – ಸುಜನಾ

೪೫. ಬಹು ಆಯ್ಕೆಯ ಜೋಡಣೆ

a. ಗಿರೀಶ್ ಕಾರ್ನಾಡ್ (i) ನಾಲ್ಕನೆಯ ಆಯಾಮ
b. ಸಾರಾ ಅಬೂಬಕರ್ (ii) ಮನಸು ಗಾಂಧೀಬಜಾರು
c. ಕುಸುಮಾಕರ ದೇವರಗೆಣ್ಣೂರ (iii) ಪುರಷೋತ್ತಮ
d. ಕೆ. ಎಸ್. ನಿಸಾರ್ ಅಹಮದ್ (iv) ಚಂದ್ರಗಿರಿಯ ತೀರದಲ್ಲಿ
(v) ಅಂಜುಮಲ್ಲಿಗೆ

ಇವುಗಳಲ್ಲಿ ಸರಿಯಾದ ಉತ್ತರ

| | a | b | c | d |
|---|---|---|---|---|
| (A) | (i) | (iii) | (ii) | (iv) |
| (B) | (ii) | (i) | (iii) | (v) |
| (C) | (v) | (iv) | (i) | (ii) |
| (D) | (iii) | (ii) | (iv) | (v) |

೪೬. ಬಹು ಆಯ್ಕೆಯ ಜೋಡಣೆ

a. ನೇಮೀನಾಥ ಪುರಾಣ (i) ಪಂಪ
b. ಶಾಂತಿಪುರಾಣ (ii) ನೇಮಿಚಂದ್ರ
c. ಪೂರ್ವಪುರಾಣ (iii) ಪೊನ್ನ
d. ಆದಿ ಪುರಾಣ (iv) ಜಿನಸೇನಾಚಾರ್ಯ
(v) ಜನ್ನ

| | a | b | c | d |
|---|---|---|---|---|
| (A) | (iii) | (ii) | (i) | (iv) |
| (B) | (ii) | (iii) | (iv) | (i) |
| (C) | (v) | (ii) | (iii) | (i) |
| (D) | (i) | (v) | (iv) | (ii) |

೪೭. ಬಹು ಆಯ್ಕೆಯ ಜೋಡಣೆ

a. ಅಸಂಗತ ನಾಟಕ (i) ಚೋರಗ್ರಹಣತಂತ್ರ
b. ಪ್ರವಾಸ ಸಾಹಿತ್ಯ (ii) ಮಾರ್ಗ
c. ಪತ್ತೇದಾರಿ ಕಾದಂಬರಿ (iii) ಬೊಕ್ಕತಲೆಯ ನರ್ತಕಿ
d. ಸಂಶೋಧನೆ (iv) ಸಂಧ್ಯಾರಾಗ
(v) ಅಪೂರ್ವ ಪಶ್ಚಿಮ

| | a | b | c | d |
|---|---|---|---|---|
| (A) | (iii) | (v) | (i) | (ii) |
| (B) | (ii) | (iii) | (iv) | (v) |
| (C) | (v) | (iv) | (i) | (iii) |
| (D) | (iv) | (ii) | (i) | (v) |

StudySite.org

ಅನುಕ್ರಮ ಮಾದರಿ : ಈ ಕೆಳಗಿನ ಕಾಲಾನುಕ್ರಮ ಸರಣಿಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ.

೪೮. (A) ಪಂಚತಂತ್ರ, ಸಮಯಪರೀಕ್ಷೆ, ಭಾಷಾಭೂಷಣ, ಭರತೇಶವೈಭವ
(B) ಸಮಯಪರೀಕ್ಷೆ, ಪಂಚತಂತ್ರ, ಭರತೇಶವೈಭವ, ಭಾಷಾಭೂಷಣ
(C) ಭರತೇಶವೈಭವ, ಭಾಷಾಭೂಷಣ, ಸಮಯ ಪರೀಕ್ಷೆ, ಪಂಚತಂತ್ರ
(D) ಪಂಚತಂತ್ರ, ಭಾಷಾಭೂಷಣ, ಭರತೇಶವೈಭವ, ಸಮಯ ಪರೀಕ್ಷೆ

೪೯. (A) ಪಾಂಚಾಲಿ, ದ್ಯಾವಾಪೃಥವಿ, ಬಕುಲದ ಹೂಗಳು, ಜೀವಧ್ವನಿ
(B) ಜೀವಧ್ವನಿ, ಪಾಂಚಾಲಿ, ಬಕುಲದ ಹೂಗಳು, ದ್ಯಾವಾಪೃಥವಿ
(C) ದ್ಯಾವಾಪೃಥವಿ, ಜೀವಧ್ವನಿ, ಬಕುಲದ ಹೂಗಳು, ಪಾಂಚಾಲಿ
(D) ಬಕುಲದ ಹೂಗಳು, ದ್ಯಾವಾಪೃಥವಿ, ಜೀವಧ್ವನಿ, ಪಾಂಚಾಲಿ

೫೦. (A) ಭಾವತರಂಗ, ಅಕ್ಷರಹೊಸಕಾವ್ಯ, ಮನುಕುಲದ ಹಾಡು, ಹೊಲೆಮಾದಿಗರ ಹಾಡು
(B) ಭಾವತರಂಗ, ಮನುಕುಲದ ಹಾಡು, ಅಕ್ಷರಹೊಸಕಾವ್ಯ, ಹೊಲೆಮಾದಿಗರ ಹಾಡು
(C) ಮನುಕುಲದ ಹಾಡು, ಅಕ್ಷರಹೊಸಕಾವ್ಯ, ಹೊಲೆಮಾದಿಗರ ಹಾಡು, ಭಾವತರಂಗ
(D) ಹೊಲೆಮಾದಿಗರ ಹಾಡು, ಮನುಕುಲದ ಹಾಡು, ಭಾವತರಂಗ, ಅಕ್ಷರಹೊಸಕಾವ್ಯ



StudySite.org StudySite.org

StudySite.org StudySite.org

ಚಿತ್ತು ಬರಹಕ್ಕಾಗಿ ಸ್ಥಳ

StudySite.org



StudySite.org StudySite.org

StudySite.org StudySite.org

ಚಿತ್ತು ಬರಹಕ್ಕಾಗಿ ಸ್ಥಳ

StudySite.org



StudySite.org StudySite.org